ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 30-11-1971.

***ಅನುಭವದ ಆತ್ಮಿಕಶಕ್ತಿಯ ಮೂಲಕ ಮಾಯೆಯ ಶಕ್ತಿಯನ್ನು ಎದುರಿಸುವುದು***

(अनुभव की विल-पावर द्वारा माया की पावर का सामना)

ಆತ್ಮಿಕ ಡ್ರಿಲ್ಲನ್ನು ತಿಳಿದುಕೊಂಡಿದ್ದೀರಾ? ಹೇಗೆ ಶಾರೀರಿಕ ಡ್ರಿಲ್‌ನ ಅಭ್ಯಾಸಿಗಳು ಒಂದು ಕ್ಷಣದಲ್ಲಿ ಎಲ್ಲಿ ಮತ್ತು ಹೇಗೆ ಬೇಕಾದರೂ ಅವರ ಶರೀರವನ್ನು ಬಾಗಿಸುತ್ತಾರೆಯೋ ಹಾಗೆಯೇ ಆತ್ಮಿಕ ಡ್ರಿಲ್ ಮಾಡುವ ಅಭ್ಯಾಸಿಗಳು ಒಂದು ಸೆಕೆಂಡಿನಲ್ಲಿ ಬುದ್ಧಿಯನ್ನು ಎಲ್ಲಿ ಬೇಕೋ, ಯಾವಾಗ ಬೇಕೋ, ಅದೇ ಸ್ಥಿತಿಯಲ್ಲಿ, ಅದೇ ಪರ್ಸೆಂಟೇಜ್ ನಿಂದ ಸ್ಥಿತ ಮಾಡಬಲ್ಲಿರಾ. ಇಂತಹ ಎವರ್ ರೆಡಿ ಆತ್ಮಿಯ ಮಿಲಿಟರಿ ಆಗಿದ್ದೀರಾ? ಈಗ ತಮ್ಮ ಸಂಪೂರ್ಣ ನಿರಾಕಾರಿ, ನಿರಹಂಕಾರಿ, ನಿರ್ವಿಕಾರಿ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ ಎಂದು ಆದೇಶ ಸಿಕ್ಕಿದಕೂಡಲೇ ಸ್ಥಿತರಾಗಬಲ್ಲಿರಾ? ಸಾಕಾರ ಶರೀರ, ಸಾಕಾರಿಸೃಷ್ಟಿ ಹಾಗೂ ವಿಕಾರಿ ಸಂಕಲ್ಪಗಳು ತಮಗಿಷ್ಟವಿಲ್ಲದಿದ್ದರೂ, ತಮ್ಮಕಡೆ ಆಕರ್ಷಿಸುವುದಿಲ್ಲವೆ? ಈ ದೇಹದ ಆಕರ್ಷಣೆಯಿಂದ ಒಂದುಸೆಕೆಂಡಿನಲ್ಲಿ ದೂರ ಆಗುವಿರಾ? ಸೋಲು ಮತ್ತು ಗೆಲುವಿಗೆ ಆಧಾರ ಒಂದು ಸೆಕೆಂಡಿನದಾಗಿರುತ್ತದೆ. ಅಂದಮೇಲೆ ಒಂದು ಸೆಕೆಂಡಿನ ಆಟವನ್ನು ಗೆಲ್ಲುವಿರಾ? ತಮನ್ನು ತಾವು ಇಂತಹ ವಿಜಯೀಗಳೆಂದು ತಿಳಿಯುತ್ತೀರಾ? ತಮನ್ನು ಸರ್ವಶಕ್ತಿಗಳಿಂದ ಸಂಪತ್ತಿವಂತರೆಂದು ತಿಳಿಯುತ್ತಿರಾ ಅಥವಾ ಇನ್ನೂ ಸಂಪೂರ್ಣ ಸಂಪತ್ತಿವಂತರಾಗಬೇಕಾಗಿದೆಯೇ? ದಾತನ ಮಕ್ಕಳು ಸದಾ ಸರ್ವಸಂಪತ್ತಿವಂತರಾಗಿರುತ್ತಾರೆ. ಹೀಗೆ ತಮ್ಮನ್ನು ತಿಳಿದುಕೊಳ್ಳುತ್ತೀರಾ ಅಥವಾ ಇಲ್ಲಿಯವರೆಗೆ 63 ಜನಗಳ ಭಕ್ತಿ ಹಾಗೂ ಭಿಕಾರಿತನದ ಸಂಸ್ಕಾರವು ಈಗಲಾದರೂ ಇಮರ್ಜ್ ಆಗುತ್ತದೆಯೇ? ತಂದೆಯ ಸಹಯೋಗ ಬೇಕು, ಆಶೀರ್ವಾದ ಬೇಕು, ಸಹಾಯ ಬೇಕು, ಶಕ್ತಿ ಬೇಕು. ಈ ಬೇಕು, ಬೇಕು ಎಂದತೂ ಇಲ್ಲವಲ್ಲವೆ? ಬೇಕು ಶಬ್ಬವು ದಾತ, ವಿದಾತ, ವರದಾತ ಮಕ್ಕಳ ಮುಂದೆ ಶೋಭಿಸುತ್ತದೆಯೇ? ಈಗಂತೂ ವಿಧಾತ ಮತ್ತು ವರದಾತನಾಗಿ ವಿಶ್ವದ ಪ್ರತಿಯೊಂದು ಆತ್ಮನಿಗೆ ಏನಾದರೊಂದು ದಾನ ಹಾಗೂ ವರದಾನ ಕೊಡಬೇಕಾಗಿದೆ. ಇದು ಬೇಕು. ಅದು ಬೇಕು ಎಂದಲ್ಲ, ದಾತನ ಮಕ್ಕಳು ಸರ್ವಶಕ್ತಿಗಳಿಂದ ಸಂಪನ್ನರಾಗಿರುತ್ತಾರೆ. ಇದೇ ಸಂಪನ್ನಸ್ಥಿತಿಯು ಸಂಪೂರ್ಣ ಸ್ಥಿತಿಯನ್ನು ಸಮೀಪ ತರುತ್ತದೆ. ತಮ್ಮನ್ನು ವಿಶ್ವದಲ್ಲಿನ ಸರ್ವಆತ್ಮರಿಂದ ನ್ಯಾರಾ ಮತ್ತು ತಂದೆಗೆ ಪ್ಯಾರಾ ವಿಶೇಷ ಆತ್ಮರೆಂದು ತಿಳಿಯುತ್ತೀರಾ? ಸಾಧಾರಣ ಆತ್ಮರು ಮತ್ತು ವಿಶೇಷ ಆತ್ಮರಲ್ಲಿ ಇರುವ ಅಂತರವೇನೆಂದು ತಿಳಿದುಕೊಂಡಿದ್ದೀರಾ? ವಿಶೇಷ ಆತ್ಮರ ವಿಶೇಷತೆಯೂ ಪ್ರತ್ಯಕ್ಷರೂಪದಲ್ಲಿ ಇದೇ ಕಂಡುಬರಲಿ- ಅನ್ಯರೂ ಸಹ ಸದಾ ತಮ್ಮನ್ನು ಸರ್ವಶಕ್ತಿಗಳಿಂದ ಸಂಪನ್ನ ಅನುಭವ ಮಾಡಲಿ, ಯಾವುದೇ ಅಪ್ರಾಪ್ತ ವಸ್ತು ಬ್ರಾಹ್ಮಣರ ಖಜಾನೆಯಲ್ಲಿಲ್ಲ ಎಂಬ ಯಾವ ಗಾಯನವಿದೆಯೋ ಅದು ಈ ಸಮಯದ್ದಾಗಿದೆ. ಈಗ ಸರ್ವಶಕ್ತಿಗಳಿಂದ ತಮ್ಮನ್ನು ಸಂಪನ್ನ ಅನುಭವ ಮಾಡಿದಾಗಲೇ ಭವಿಷ್ಯದಲ್ಲಿಯೂ ಸರ್ವಗುಣಗಳಿಂದಲೂ ಸಂಪನ್ನ, ಸರ್ವಪದಾರ್ಥಗಳಿಂದಲೂ ಸಂಪನ್ನ ಮತ್ತು ಸಂಪೂರ್ಣ ಸ್ಥಿತಿಯನ್ನು ಪಡೆಯುವಿರಿ ಆದ್ದರಿಂದ ತಮ್ಮನ್ನು ಈ ರೀತಿ ಮಾಡಿಕೊಳ್ಳುವುದಕ್ಕಾಗಿಯೇ ಬಂದಿದ್ದೀರಿ. ಯಾವುದೆಲ್ಲಾ ತಮ್ಮಲ್ಲಿ ಅಪ್ರಾಪ್ತಿಯ ಅನುಭವ ಮಾಡುತ್ತಿದ್ದೀರೋ ಅದು ಪ್ರಾಪ್ತಿಯ ರೂಪದಲ್ಲಿ ಪರಿವರ್ತನೆಯಾಯಿತೇ ಅಥವಾ ಈಗಲೂ ಯಾವುದಾದರೂ ಅಪ್ರಾಪ್ತಿಯ ಅನುಭವ ಮಾಡುತ್ತೀರಾ? ಈ ಪ್ರಾಪ್ತಿಯು ಅವಿನಾಶಿಯಾಗಿರುತ್ತದೆಯಲ್ಲವೆ? ಪ್ರಾಪ್ತಿ ಎಂದರೆ ಪ್ರಾಪ್ತಿ.

ಅನುಭವ ಸ್ವರೂಪರಾಗಿಬಿಟ್ಟಿದ್ದೀರಿ ಅಂದಮೇಲೆ ಅನುಭವದ ಮಾತುಗಳು ಅವಿನಾಶಿಯಾಗಿರುತ್ತವೆ, ಕೇಳಿರುವ ಮಾತುಗಳು, ವಾಯು ಮಂಡಲದ ಪ್ರಭಾವದ ಆಧಾರದ ಮೇಲೆ ಪ್ರಾಪ್ತಿಯಾಗಿರುವ ಮಾತುಗಳು, ಯಾವುದೇ ಶ್ರೇಷ್ಠ ಆತ್ಮರಿಂದ ಕೇಳಿರುವ ಮಾತುಗಳು ಅವರ ಪ್ರಭಾವದಲ್ಲಿ ಪ್ರಾಪ್ತಿಯಾಗಿರುವ ಮಾತುಗಳು ಅಲ್ಪಕಾಲದ್ದಾಗಿರಬಹುದು ಆದರೆ ತಮ್ಮ ಅನುಭವದ ಮಾತುಗಳು ಸದಾಕಾಲದ ಹಾಗೂ ಅವಿನಾಶಿಯಾಗಿ ಬಿಡುತ್ತದೆ. ಅಂದಾಗ ಕೇಳುವವರಾಗಿದ್ದೀರಾ ಅಥವಾ ಅನುಭವೀ

ಮೂರ್ತಿಗಳಾಗಿದ್ದೀರಾ? ಅಥವಾ ಈಗ ಪುನಃ ಕೇಳಿರುವ ಮಾತುಗಳನ್ನು ಮನನ ಮಾಡಿದನಂತರ ಅನುಭವಿಯಾಗುವಿರಾ? ಪ್ರಾಪ್ತಿಯಾಗಿರುವ ಖಜಾನೆಯನ್ನು ತಮ್ಮ ಅನುಭವದಲ್ಲಿ ತಂದಿದ್ದೀರಾ ಅಥವಾ ಅಲ್ಲಿ ಹೋದನಂತರ ತರುತ್ತೀರಾ? ಎಲ್ಲದಕ್ಕಿಂತ ಶಕ್ತಿಶಾಲಿ ಸ್ಥಿತಿಯಾಗಿದೆ ತನ್ನ ಅನುಭವ ಏಕೆಂದರೆ ಅನುಭವೀ ಆತ್ಮನಲ್ಲಿ ವಿಲ್ ಪವರ್(ಆತ್ಮಿಕಶಕ್ತಿ) ಇರುತ್ತದೆ. ಅನುಭವದ ಆತ್ಮಿಕಶಕ್ತಿಯಿಂದ ಮಾಯೆಯ ಯಾವುದೇ ಶಕ್ತಿಯನ್ನು ಎದುರಿಸಬಹುದು. ಯಾರಲ್ಲಿ ಆತ್ಮಿಕಶಕ್ತಿ ಇರುವುದೋ ಅವರು ಸಹಜವಾಗಿ ಸರ್ವಮಾತುಗಳನ್ನು, ಸರ್ವಸಮಸ್ಯೆಗಳನ್ನು ಎದುರಿಸುತ್ತಾರೆ ಮತ್ತು ಸರ್ವಆತ್ಮರನ್ನು ಸದಾ ಸಂತುಷ್ಟರನ್ನಾಗಿ ಮಾಡುತ್ತಾರೆ. ಎದುರಿಸುವ ಶಕ್ತಿಯಿಂದ ಸರ್ವರನ್ನು ಸಂತುಷ್ಟಪಡಿಸುವ ಶಕ್ತಿ ತನ್ನ ಅನುಭವದ ಆತ್ಮಿಕಶಕ್ತಿಯಿಂದ ಸಹಜವಾಗಿ ಪ್ರಾಪ್ತಿಯಾಗುತ್ತದೆ. ಅಂದಮೇಲೆ ಎರಡೂ ಶಕ್ತಿಗಳನ್ನು ತಮ್ಮಲ್ಲಿ ಅನುಭವ ಮಾಡುತ್ತಿದ್ದೀರಿ. ಒಂದುವೇಳೆ ಎರಡೂ ಶಕ್ತಿಗಳು ಬಂದರೆ ವಿಜಯಿಗಳಾಗಿಬಿಡುವಿರಿ, ವಿಜಯಿಗಳಾಗಿದ್ದೀರಾ? ವಿಜಯಿ ಅರ್ಥಾತ್ ಸ್ವಪ್ನದಲ್ಲಿಯೂ, ಸಂಕಲ್ಪರೂಪದಲ್ಲಿಯೂ ಸೋಲುಂಟಾಗಬಾರದು. ಯಾವಾಗ ಸ್ವಪ್ನದಲ್ಲಿಯೇ ಸೋಲುಂಟಾಗುವುದಿಲ್ಲ ಅಂದಮೇಲೆ ಪ್ರತ್ಯಕ್ಷಜೀವನದಲ್ಲಂತೂ ಅದು ಇರುವುದಿಲ್ಲ. ಈ ರೀತಿ ಪ್ರತೀ ಸಂಕಲ್ಪ, ಪ್ರತೀ ಮಾತು, ಪ್ರತೀ ಕರ್ಮ ವಿಜಯಿಯಾಗಿರಲಿ ಅರ್ಥಾತ್ ಸೋಲಿನ ಹೆಸರು-ಗುರುತು ಇಲ್ಲವೆ ಇಲ್ಲ. ಇಂತಹ ಸಂಪೂರ್ಣ ಚಿಹ್ನೆಯನ್ನು ಒಂದುಸೆಕೆಂಡಿನಲ್ಲಿ ತಮ್ಮ ಗುರಿಯನ್ನಾಗಿ ಮಾಡಿಕೊಳ್ಳುವಿರಾ? ಹೇಗೆ ಮಿಲಿಟರಿಯವರು ಒಂದು ಸೆಕೆಂಡಿನಲ್ಲಿ ಒಂದುವೇಳೆ ತಮ್ಮ ಗುರಿಯನ್ನು ಸಾಧಿಸಿದದಿದ್ದರೆ ಸೋತುಹೋಗುತ್ತಾರೆ. ಗುರಿ ಸರಿಯಿದ್ದಾಗ ವಿಜಯಿಗಳಾಗುತ್ತಾರೆ. ಹಾಗೆಯೇ ತಮ್ಮ ಬುದ್ಧಿಯನ್ನೂ ಈ ಗುರಿಯತನಕ ಒಂದುಸೆಕೆಂಡಿನಲ್ಲಿ ಸ್ಥಿತ ಮಾಡಬಲ್ಲಿರಾ? ಈ ರೀತಿ ಎವರೆಡಿಯಾಗಿದ್ದೀರೋ ಅಥವಾ ಪರಿಶ್ರಮಪಟ್ಟನಂತರ ಗುರಿಯಲ್ಲಿ ಸ್ಥಿತರಾಗುತ್ತೀರೋ? ಒಂದುವೇಳೆ ಈ ರೀತಿ ಪ್ರಯತ್ನ ಮಾಡುತ್ತಾ-ಮಾಡುತ್ತಾ ವಿಜಯದ ಕ್ಷಣವು ಕಳೆದುಹೋದರೆ, ನಂತರ ವಿಜಯಮಾಲೆಯ ಮಣಿ ಹೇಗಾಗುವಿರಿ? ಆದ್ದರಿಂದ ಹೇಗೆ ನಿರಂತರ ನೆನಪಿನಲ್ಲಿರಬೇಕಾಗಿದೆಯೋ ಹಾಗೆಯೇ ನಿರಂತರ ವಿಜಯಿಗಳಾಗಿ, ಈ ರೀತಿಯ ಚೆಕಿಂಗ್ ಮಾಡಿಕೊಳ್ಳಿ ಇಂದು ಇಡೀ ದಿನದಲ್ಲಿ ಸಂಕಲ್ಪ, ವಚನ, ಕರ್ಮ, ಸಂಬಂಧ-ಸಂಪರ್ಕ, ಸ್ನೇಹ-ಸಹಯೋಗ ಮತ್ತು ಸೇವೆಯಲ್ಲಿ ಎಲ್ಲಿಯವರೆಗೆ ವಿಜಯಿಯಾದೆನು? ಒಂದುವೇಳೆ ಬಹಳ ಸಮಯದಿಂದ ಸದಾಕಾಲದ ವಿಜಯಿ, ಪ್ರತಿ ಹೆಜ್ಜೆಯ ವಿಜಯಿ, ಪ್ರತೀ ಸಂಕಲ್ಪದ ವಿಜಯಿಯಾಗಿದ್ದರೆ ಆಗಲೇ ವಿಜಯಮಾಲೆಯ ಸಮೀಪ ಮಣಿಯಾಗುವಿರಿ. ಇಷ್ಟು ಸರ್ವೀಸಿನ ನಂತರವೂ 108 ಜನ ಮಾತ್ರ ವಿಜಯಿಗಳು ಏಕೆ ಆದರು? ಹೇಗಾದರು? ಈ ಪುರುಷಾರ್ಥದಿಂದ ಇಂತಹ ಶ್ರೇಷ್ಠರಾದರು. ಅಂದಮೇಲೆ ಬಹಳ ಸಮಯದಿಂದ ಸದಾಕಾಲದ ವಿಜಯಿಗಳಾದಾಗಲೇ ಬಹಳಸಮಯದ ನೆನಪಾರ್ಥವನ್ನು ಉಳಿಸಿಕೊಳ್ಳುವಿರಿ ಆದ್ದರಿಂದ ಈಗ ಏನು ಮಾಡುವಿರಿ?

ಭಟ್ಟಿಯಲ್ಲಿ ಇದೇ ಪರಿವರ್ತನೆ ಮಾಡಿಕೊಳ್ಳಿ ಬಹಳ ಸಮಯದಿಂದ ಸದಾಕಾಲದ ವಿಜಯಿಗಳಾಗಿ, ಈ ರೀತಿಯ ಅನುಭವ ಅನೇಕ ಆತ್ಮರು ತಮ್ಮಮೂಲಕ ಮಾಡಿಕೊಂಡು ಹೋಗಲಿ, "ಇವರು ಮಧುಬನ ಅವ್ಯಕ್ತವತನದಿಂದ ಅವ್ಯಕ್ತಸ್ಥಿತಿಯಲ್ಲಿ ಸ್ಥಿತರಾಗಿ, ಅವ್ಯಕ್ತ ಫರಿಶ್ತೆಗಳು ವ್ಯಕ್ತದೇಶದಲ್ಲಿ ವಿಶ್ವಕಲ್ಯಾಣಕ್ಕೆ ನಿಮಿತ್ತರಾಗಿ ಬಂದಿದ್ದಾರೆ" ಎಂದು. ತಮ್ಮ ಪ್ರವೃತ್ತಿಯವರು ತಾವಾತ್ಮರಲ್ಲಿ ಇಂತಹ ಪರಿವರ್ತನೆಯನ್ನು ಅನುಭವ ಮಾಡಲಿ. ಇದನ್ನೇ ಭಟ್ಟಿಯ ಪರಿವರ್ತನೆ ಎಂದು ಹೇಳಲಾಗುವುದು. ನಯನಗಳು ಆತ್ಮೀಯತೆಯ ಅನುಭವ ಮಾಡಿಸಲಿ, ಚಲನೆಯು ತಂದೆಯ ಚರಿತ್ರೆಯ ಸಾಕ್ಷಾತ್ಕಾರ ಮಾಡಿಸಲಿ. ಮಸ್ತಕವು ಮಸ್ತಕಮಣಿಯ ಸಾಕ್ಷಾತ್ಕಾರ ಮಾಡಿಸಲಿ. ಈ ಅವ್ಯಕ್ತಮೂರ್ತಿಯು ದಿವ್ಯ, ಅಲೌಕಿಕ ಸ್ಥಿತಿಯ ಪ್ರತ್ಯಕ್ಷ ರೂಪವನ್ನು ತೋರಿಸಲಿ. ತಮ್ಮ ಅಲೌಕಿಕ ವೃತ್ತಿಯು ಯಾವುದೇ ತಮೋಗುಣಿ ವೃತ್ತಿಯವರಿಗೆ ತಮ್ಮ ಸತೋಗುಣಿ ವೃತ್ತಿಯ ಸ್ಮೃತಿ ತರಿಸಲಿ, ಇದನ್ನೇ ಪರಿವರ್ತನೆಯೆಂದು ಹೇಳಲಾಗುತ್ತದೆ ಹಾಗೂ ಇಂತಹವರಿಗೇ ಸರ್ವೀಸೇಬಲ್ ಎಂದು ಹೇಳಲಾಗುತ್ತದೆ. ತಾವು ಪ್ರತೀ ಹೆಜ್ಜೆಯಲ್ಲಿ ಸೇವೆಯಲ್ಲಿ ತತ್ಪರರಾಗುವ, ಇಂತಹ ಸೇವಾಧಾರಿಗಳಾಗಿದ್ದೀರಾ? ನಾಲ್ಕು ಗಂಟೆಗಳ ಸೇವೆ ಮಾಡಬೇಕೆಂದಲ್ಲ, ಸದಾಕಾಲದ ವಿಜಯಿಗಳಾಗಿ, ಸದಾ ಸೇವೆಯಲ್ಲಿ ತತ್ಪರರಾಗಿರುವಂತಹ ಸದಾಕಾಲದ ಸೇವಾಧಾರಿ ಸದಾಕಾಲದ ಸೇವಾಧಾರಿಯ ಒಂದುಕ್ಷಣವೂ ಸಹ ಸೇವೆಯಿಲ್ಲದೆ ಹೋಗಬಾರದು. ಈ ರೀತಿ ಸೇವಾಧಾರಿಗಳಾಗುವುದೇ ವಿಶೇಷ ಆತ್ಮರ ವಿಶೇಷತೆಯಾಗಿದೆ ಆದ್ದರಿಂದ ಎಲ್ಲಾ ಮಾತುಗಳಲ್ಲಿ ಫುಲ್

ಆಗಬೇಕಾಗಿದೆ. ತಂದೆಯ ಮಹಿಮೆಯಲ್ಲಿ ಎಲ್ಲಾ ಶಬ್ದಗಳಲ್ಲಿ ಫುಲ್ ಶಬ್ದವು ಬರುತ್ತದೆಯಲ್ಲವೆ. ಯಾರು ಎಲ್ಲಾ ಮಾತುಗಳಲ್ಲಿ ಫುಲ್ ಆಗಿರುವರೋ ಅವರು ಫೇಲ್ ಆಗುವುದಿಲ್ಲ. ಮತ್ತು ಫುಲ್‌ನಲ್ಲಿ ಫ್ಲೋ (ಲೋಪದೋಷ) ಇರುವುದಿಲ್ಲ. ಆದ್ದರಿಂದ ಫೇಲ್ ಆಗುವುದಿಲ್ಲ. ಫೇಲ್ ಆಗುವುದಿಲ್ಲ ಮತ್ತು ಜೊತೆಗೆ ವ್ಯರ್ಥಮಾತುಗಳನ್ನು ಫೀಲ್ ಮಾಡುವುದಿಲ್ಲ. ಕೆಲಕೆಲವು ಮಾತುಗಳಲ್ಲಿ ಫೀಲ್ ಮಾಡುತ್ತೀರಲ್ಲವೆ, ಫುಲ್ ಆಗಿರುವವರು ವ್ಯರ್ಥಮಾತುಗಳನ್ನು ಫೀಲ್ ಮಾಡುವುದಿಲ್ಲ, ಫೇಲ್ ಆಗುವುದಿಲ್ಲ. ಇಂತಹ ತಿಲಕಧಾರಿ ಗಳಾಗಿದ್ದೀರಾ? ಸರ್ವಶಕ್ತಿಗಳಿಂದ ಸಂಪನ್ನ ಎಂಬ ತಿಲಕವನ್ನು ತಮ್ಮ ಮಸ್ತಕದಲ್ಲಿ ಇಟ್ಟುಕೊಂಡಿದ್ದೀರಾ? ಒಂದುವೇಳೆ ಈಗ ತಿಳಿಸಿರುವ ತಿಲಕವನ್ನು ಸದಾ ಮಸ್ತಕದಲ್ಲಿ ಇಟ್ಟುಕೊಳ್ಳದಿದ್ದರೆ ನೆನಪಿನಲ್ಲಿಯೂ ನೆನಪಿನ ಬದಲು ಏನು ಮಾಡುತ್ತಾರೆ? ನೆನಪಿನ ಬದಲು ದೂರು(ಬೇಡಿಕೆ) ಕೂಡುತ್ತಾರೆ. ಆದರೆ ಈಗ ಮಾಡುವುದಿಲ್ಲವೇ? ಈ ರೀತಿಯ ಬೇಡಿಕೆಗಳ ಫೈಲ್ ಆಗಿಬಿಟ್ಟಿದೆ. ಪ್ರತಿಯೊಬ್ಬರ ಬೇಡಿಕೆಗಳ ಫೈಲ್ ಎಷ್ಟಿದೆಯೆಂದು ಗೊತ್ತಿದೆಯೇ? ಆದ್ದರಿಂದ ನಿರಂತರ ನೆನಪಿನಲ್ಲಿದ್ದಾಗ, ನಿರಂತರ ವಿಜಯಿಗಳಾದಾಗ, ನಿರಂತರ ಸೇವಾಧಾರಿಗಳಾದಾಗ ಬೇಡುವ ಅವಶ್ಯಕತೆಯೇ ಇರುವುದಿಲ್ಲ. ಸಂಪೂರ್ಣ ಬಲಹೀನತೆಗಳನ್ನು ಆಹುತಿ ಮಾಡುವುದಕ್ಕಾಗಿ ಭಟ್ಟಿಯಲ್ಲಿ ಬಂದಿದ್ದೀರಲ್ಲವೆ. ಈಗ ಸರ್ವಬಲಹೀನತೆಗಳ ಆಹುತಿಯನ್ನು ಯಜ್ಞದಲ್ಲಿ ಹಾಕಿದಿರಾ ಅಥವಾ ಇನ್ನೂ ಉಳಿದುಕೊಂಡಿದೆಯೇ? ಆಹುತಿಯನ್ನು ಹಾಕುವಾಗ ಅಂತ್ಯದಲ್ಲಿ ಏನು ಹೇಳುತ್ತಾರೆ? ಸ್ವಾಹಾ ಎಂದು ಹೇಳುತ್ತಾರೆ ಅಂದಮೇಲೆ ತಾವೆಲ್ಲರೂ ಸ್ವಾಹಾ ಆದಿರಾ? ಸ್ವಾಹಾ ಆದಮೇಲೆ ಅಂತಹವರು ಕಳೆದಮಾತುಗಳನ್ನು ಸ್ವಪ್ನದಲ್ಲಿಯೂ ನೋಡುವುದಿಲ್ಲ, ಈ ರೀತಿ ಸ್ವಾಹಾ ಆದಿರಾ? ಸಾಹಸ ಮತ್ತು ಉಲ್ಲಾಸ- ಇವೆರಡೂ ಈಗಿನ ಫಲಿತಾಂಶದಲ್ಲಿ ಅನೇಕರಲ್ಲಿ ಕಡಿಮೆ ಕಾಣಿಸುತ್ತಿದೆ. ಇದೇ ಸಾಹಸ ಮತ್ತು ಉಲ್ಲಾಸವನ್ನು ಸದಾಕಾಲಕ್ಕಾಗಿ ತಮ್ಮ ವೃತ್ತಿಯನ್ನಾಗಿ ಮಾಡಿಕೊಳ್ಳಿ. ಧರಣಿಯು ಮೃದುವಾಗಿಯೂ ಇದೆ ಮತ್ತು ಫಲೀಭೂತವೂ ಆಗಿದೆ ಆದರೆ ತಮ್ಮ ಫಲೀಭೂತ ಧರಣಿಯಲ್ಲಿ ಕಳೆದುಹೋಗಿರುವ ಇಂದಿನ ಜೀವನದ ವಿಕರ್ಮ ಮತ್ತು ವಿಕರ್ಮದ ಮುಳ್ಳಿನ ಗಿಡಗಳನ್ನು ಮತ್ತೆ ಬೆಳೆಯಲು ಬಿಡಬೇಡಿ. ಮುಳ್ಳುಗಳನ್ನು ತಂದೆಯಮುಂದೆ ಸಮರ್ಪಣೆ ಮಾಡಿದಿರಾ? ಸರ್ವಮುಳ್ಳುಗಳು ಯಾವುದು? ಇಲ್ಲಿಯವರೆಗೆ ಒಳಗಿರುವ ಕಾರಣ ನಷ್ಟ ಮಾಡುತ್ತಿದ್ದವು. ಅವೆಲ್ಲವನ್ನೂ ತಂದೆಯ ಮುಂದೆ ಸ್ವಾಹಾ ಮಾಡಿದಿರಾ? ಬೂದಿಯನ್ನೂ ಸ್ವಾಹಾ ಮಾಡಿರಿ ಎಂದು ಹೇಳುತ್ತಾರೆ. ಬೂದಿಯಾಗಿರುವ ವಸ್ತು ಅಥವಾ ಭಸ್ಮವಾಗಿರುವ ವಸ್ತುವನ್ನು ಎಂದೂ ತಮ್ಮ ಧರಣಿಯಲ್ಲಿ ಬಿತ್ತಬಾರದು ಅರ್ಥಾತ್ ಸ್ಮೃತಿಯಲ್ಲಿ ತರಬಾರದು. ಸ್ವಾಹಾ ಅರ್ಥಾತ್ ಹೆಸರು, ಗುರುತು ಸಮಾಪ್ತಿ.

ಈ ದಿನದಿಂದ ಇದೇ ರೀತಿ ತಿಳಿದುಕೊಳ್ಳಿ – ನಾನು ಸತೋಗುಣಿ ಆತ್ಮನದು ಈ ಸಂಸ್ಕಾರವಲ್ಲ ಅರ್ಥಾತ್ ಇದು ನನ್ನ ಸಂಸ್ಕಾರವಲ್ಲ. ಹೇಗೆ ಅನ್ಯರ ಸಂಸ್ಕಾರಗಳನ್ನು ಸಾಕ್ಷಿಯಾಗಿ ನೋಡುತ್ತೀರೋ ಹಾಗೆಯೇ ತಮ್ಮ ತಮೋಪ್ರಧಾನ ಸ್ಥಿತಿಯ ಸಂಸ್ಕಾರಗಳನ್ನೂ ಸಹ ಅದೇರೀತಿ ಸಾಕ್ಷಿಯಾಗಿ ನೋಡಿರಿ. ಈ ರೀತಿ ಸಮಾಪ್ತಿ ಮಾಡಿಬಿಡಿ, ಸ್ವಾಹಾ ಆಗಿಹೋಯಿತು ಎಂದು ತಿಳಿದಾಗಲೇ ಸದಾ ಸಫಲತೆಯನ್ನು ಪಡೆಯುತ್ತಾ ಇರುತ್ತೀರಿ. ಒಳ್ಳೆಯದು.

ಅವ್ಯಕ್ತ ಮುರಳಿ 31-11-1971.

***ಅನುಭವದ ಆತ್ಮಿಕ ಶಕ್ತಿಯ ಮೂಲಕ ಮಾಯೆಯ ಶಕ್ತಿಯನ್ನು ಎದುರಿಸುವುದು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವಪರಮಾತ್ಮ ನನ್ನ ತಂದೆ.

1. ನಾನು ಒಂದು ಕ್ಷಣದಲ್ಲಿ ಬುಧ್ಧಿಯನ್ನು ಯಾವಾಗ ಮತ್ತು ಎಲ್ಲಿ, ಎಂತಹ ಸ್ಥಿತಿಯಲ್ಲಿ ಬೇಕಾದರೆ ಆ ಸ್ಥಿತಿಯಲ್ಲಿ ಅದೇ ಪ್ರತಿಶತದಲ್ಲಿ ಸ್ಥಿತ ಮಾಡಬಲ್ಲ ಆತ್ಮಿಕ ಸೇನೆ ಮತ್ತು ವಿಜಯೀ ಸ್ವರೂಪ.

2. ಧಾತಾ, ವಿಧಾತ, ವರದಾತನ ಮಗುವಾದ ನಾನು ವಿಧಾತ ಮತ್ತು ವರದಾತನಾಗಿ ವಿಶ್ವದಲ್ಲಿರುವ ಪ್ರತಿ ಆತ್ಮನಿಗೆ ಯಾವುದೋ ಒಂದು ದಾನವನ್ನು ಅಥವಾ ವರದಾನವನ್ನು ಕೊಟ್ಟು ಸಂಪನ್ನವಾಗಿ ಸಂಪೂರ್ಣ ಸ್ಥಿತಿಯನ್ನು ಸಮೀಪಕ್ಕೆ ತಂದಿದ್ದೇನೆ.

3. ನಾನು ವಿಶ್ವದಲ್ಲಿರುವ ಸರ್ವಾತ್ಮರಿಗೆ ಅತೀತವಾಗಿ ಮತ್ತು ತಂದೆಗೆ ಪ್ರಿಯವಾಗಿರುವ ವಿಶೇಷ ಆತ್ಮ.

4. ನಾನು ವರ್ತಮಾನದಲ್ಲಿ ಸ್ವಯಂನ್ನು ಸರ್ವಶಕ್ತಿಗಳಿಂದ ಸಂಪನ್ನವಾಗಿಸಿಕೊಂಡು ಭವಿಷ್ಯದಲ್ಲಿ ಸದಾ ಸರ್ವ ಗುಣಗಳಿಂದ ಸಂಪನ್ನವಾಗಿ, ಸರ್ವ ಪದಾರ್ಥಗಳಿಂದ ಸಂಪನ್ನವಾಗಿ ಸಂಪೂರ್ಣ ಸ್ಥಿತಿಯನ್ನು ಪಡೆದಿದ್ದೇನೆ.

5. ನಾನು ಅನುಭವದ ಆತ್ಮಬಲದಿಂದ ಮಾಯೆಯನ್ನು, ವಿಷಯಗಳನ್ನು, ಎಲ್ಲಾ ಸಮಸ್ಯೆಗಳನ್ನು ಎದುರಿಸಿ ಸರ್ವಾತ್ಮರನ್ನು ಸಂತುಷ್ಟಪಡಿಸಿದ್ದೇನೆ.

6. ನಾನು ಪ್ರತಿಯೊಂದು ಸಂಕಲ್ಪ ಮಾತು ಕರ್ಮದಲ್ಲಿ ವಿಜಯಿಯಾಗಿ ಒಂದು ಕ್ಷಣದಲ್ಲಿ ಬುದ್ದಿಯನ್ನು ಏಕಾಗ್ರ ಮಾಡಿ ಸಂಪೂರ್ಣ ಗಮ್ಯಕ್ಕೆ ತಲುಪಿರುವ ವಿಜಯೀ ಮಾಲೆಯ ಮಣಿ.

7. ನನ್ನನ್ನು ನೋಡಿ ನನ್ನ ಕುಟುಂಬ ಸದಸ್ಯರು "ಮಧುವನ ಅವ್ಯಕ್ತ ವತನದಿಂದ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತವಾಗಿರುವ ಅವ್ಯಕ್ತ ಪರಿಶ್ತಾ ವ್ಯಕ್ತ ದೇಶದಲ್ಲಿ ವಿಶ್ವ ಕಲ್ಯಾಣದ ನಿಮಿತ್ತ ಬಂದಿದ್ದಾರೆ" ಎಂಬ ಅನುಭವ ಮಾಡಿಕೊಂಡಿದ್ದಾರೆ.

8. ನಾನು ಒಂದು ಕ್ಷಣ ಕೂಡ ಸೇವೆ ಇರದೆ ಇರಲಾಗದ, ಸದಾ ಸೇವೆಯಲ್ಲಿ ತತ್ಪರವಾಗಿರುವ ಸೇವಾಧಾರಿ.

9. ವಿಶೇಷ ಆತ್ಮನಾದ ನಾನು ನನ್ನ ಮಸ್ತಕದಲ್ಲಿ ಸರ್ವ ಶಕ್ತಿಗಳಿಂದ ಸಂಪನ್ನ ಎಂಬ ತಿಲಕವನ್ನು ಧರಿಸಿದ್ದೇನೆ.

10. ನಾನು ತಮೋ ಪ್ರಧಾನ ಸಂಸ್ಕಾರಗಳನ್ನೆಲ್ಲವನ್ನು ಸ್ವಾಹ ಮಾಡಿ ಸಫಲತೆಯನ್ನು ಪಡೆದಿದ್ದೇನೆ.